# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 190–ಮಂಗಮ್ಮನಪಾಳ್ಯ

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಹೆಚ್.ಎಸ್.ಆರ್ ಉಪವಿಭಾಗ) ರವರು ದಿನಾಂಕ: 07.08.2021 ರಂದು ಬೆಳಿಗ್ಗೆ 11.30 ಘಂಟೆಗೆ Ward DETER Commitee ಅನ್ನು 190–ಮಂಗಮ್ಮನಪಾಳ್ಯ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

**ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ | ಮೋಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಟಿ ಹನುಮಂತರಾಯ | ವಾರ್ಡ್ ನೋಡಲ್ ಅಧಿಕಾರಿ (ಎ.ಇ.ಇ) | 8105005285 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.190 | 7795356105 |
| 3 | ಶ್ರೀ ಚಂದ್ರ ರೆಡ್ಡಿ | ಸದಸ್ಯರು | 9900115285 |
| 4 | ಶ್ರೀ ಶ್ರೀನಿವಾಸ ರೆಡ್ಡಿ | ಸದಸ್ಯರು | 9845284088 |
| 5 | ಶ್ರೀ ಸುರೇಶ್ ರೆಡ್ಡಿ | ಸದಸ್ಯರು | 9900388078 |
| 6 | ಶ್ರೀ ಗೋಪಿನಾಥ.ಕೆ | ಸದಸ್ಯರು | 9243111520 |
| 7 | ಶ್ರೀ ಕೇಶವ ರೆಡ್ಡಿ | ಸದಸ್ಯರು | 9945265631 |
| 8 | ಶ್ರೀ ರಾಘವೇಂದ್ರ | ಸ್ವಯಂ ಸೇವಕರು | 9845645257 |
| 9 | ಶ್ರೀ ಎನ್.ಜೆ ಮ್ಯಾಥ್ಯು | ಸ್ವಯಂ ಸೇವಕರು | 9900134704 |
| 10 | ಶ್ರೀ ಸುಧೀರ್ ಕುಮಾರ್ ಎನ್ | ಸ್ವಯಂ ಸೇವಕರು | 9880535927 |
| 11 | ಶ್ರೀ ಡಾ|| ಯೋಗೇಶ್ | ಪ್ರಾ.ಆ.ಕೇಂ (ವೈದ್ಯರು) | 9242832196 |
| 12 | ಶ್ರೀಮತಿ ಡಾ|| ಮಹಾದೇವಿ | ಪ್ರಾ.ಆ.ಕೇಂ (ವೈದ್ಯರು) | 9980553985 |
| 6 | ಶ್ರೀ ಹರೀಶ್.ಹೆಚ್.ಆರ್ | ಅರಣ್ಯ ವಲಯ ಅಧಿಕಾರಿ | 9742612471 |
| 7 | ಶ್ರೀಮತಿ ಲಕ್ಷ್ಮೀ ಬಿ. | ಸಹಾಯಕ ಕಂದಾಯ ಅಧಿಕಾರಿ | 7892757079 |
| 8 | ಶ್ರೀ ವಿನೋದ್.ಜಿ | ಹಿರಿಯ ಆರೋಗ್ಯ ಪರಿವೀಕ್ಷಕರು | 9844629911 |
| 9 | ಶ್ರೀ ಹೊನ್ನೂರ್ ಬಾಷ | ಕಿರಿಯ ಆರೋಗ್ಯ ಪರಿವೀಕ್ಷಕರು | 9945145661 |
| 10 | ಶ್ರೀ ನಟರಾಜ.ಬಿ.ಸಿ | ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾಟರ್ ಇನ್ಸ್‌ಪೆಕ್ಟರ್ | 9900095697 |
| 11 | ಶ್ರೀ ಎಸ್.ಜಿ ನಾರಾಯಣಪ್ಪ | ತೋಟಗಾರಿಕೆ ನಿರ್ವಾಹಕರು | 9739063379 |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸದ್ಯಸರು, ಸ್ವಯಂ ಸೇವಕರು ಮತ್ತು ಅಧಿಕಾರಿಗಳ ಸಹಾಕರದೊಂದಿಗೆ ಕೋವಿಡ್–19, 3ನೇ ಅಲೆಯ ಸಿದ್ಧತೆಗೆ ಸೂಕ್ತ ಕ್ರಮ ಕೈಗೊಳುವಂತೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಸೂಚಿಸಿದರು.

**(ಮು.ತಿ.ನೋ)**

Scanned with

- **<u>ಆರೋಗ್ಯ ಇಲಾಖೆ: ಕೋವಿಡ್-19ರ ಬಗ್ಗೆ :</u>**

1. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪರೀಕ್ಷೆಯನ್ನು ಹೆಚ್ಚಾಗಿ ನಡೆಸುವಂತೆ ಹಾಗೂ ಲಸಿಕೆ ಹೆಚ್ಚಿನ ಪ್ರಮಾಣದಲ್ಲಿ ತರಿಸುವಂತೆ ಶ್ರೀ ಗೋಪಿನಾಥ & ಶ್ರೀ ಶ್ರೀನಿವಾಸ ರೆಡ್ಡಿ ಸದ್ಯಸರು ರವರು ಮತ್ತು ಇತರರು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ ಡಾ॥ಯೋಗೇಶ್. ವೈದ್ಯರು ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿದಿನ ಕೋವಿಡ್-19 ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಹಾಗೂ ಲಸಿಕೆಯನ್ನು ವಾರ್ಡ್ ವ್ಯಾಪ್ತಿಯಲ್ಲಿರುವ ಜನ ಸಂಖ್ಯೆ ಆಧಾರದ ಮೇಲೆ ಲಸಿಕೆ ಹಂಚಿಕೆ ಮಾಡಲಾಗುತ್ತಿದೆ ಎಂದು ಸಭೆಯಲ್ಲಿ ತಿಳಿಸಿರುತ್ತಾರೆ.
2. ಹಿಂದಿನ ಸಭೆಯ ದಿನಾಂಕ: 17.07.2021 ರಂದು ಶ್ರೀ ಉಮೇಶ್ ಮತ್ತು ಶ್ರೀ ಚಂದ್ರಾರೆಡ್ಡಿ, ಸದಸ್ಯರು ರವರು ಪ್ರಸ್ತಾಪಿಸಿರುವಂತೆ, ವಾರ್ಡ್ ವ್ಯಾಪ್ತಿಯಲ್ಲಿ ಕಳೆದ ವಾರದಲ್ಲಿ Special Drive Camp ಅನ್ನು ಏರ್ಪಡಿಸಲಾಗಿದ್ದು, 5 ದಿನಗಳಲ್ಲಿ 3 ದಿನಗಳ ಮಾತ್ರ ಲಸಿಕೆ ಕಾರ್ಯಕ್ರಮ ನಡೆಸಿದ್ದು, ಮುಂದಿನ ದಿನಗಳಲ್ಲಿ Special Drive Camp ಅನ್ನು ಏರ್ಪಡಿಸಲು ಸದಸ್ಯರಾದ ಶ್ರೀ ಚಂದ್ರಾರೆಡ್ಡಿ, ಕೇಶವರೆಡ್ಡಿ, ಸುರೇಶ್‌ರೆಡ್ಡಿ ಮತ್ತು ಸ್ವಯಂ ಸೇವಕರಾದ ರಾಘವೇಂದ್ರ ರವರು ಸಭೆಯಲ್ಲಿ ಪ್ರಸ್ತಾಪಿಸಿರುತ್ತಾರೆ.

   ಸ್ಥಳ:

   1. 1ನೇ ದಿನ – ಅಣ್ಣಮ್ಮ ಪಾಳ್ಯ
   2. 2ನೇ ದಿನ – ಚಿಕ್ಕಬೇಗೂರು ಗೇಟ್ ಮುಖ್ಯ ರಸ್ತೆ.
   3. 3ನೇ ದಿನ – ರಾಮಾಣ್ಣ ಕಾಂಪೌಂಡ್ ಹತ್ತಿರ
   4. 4ನೇ ದಿನ – ಸೋಮಸುಂದರಪಾಳ್ಯ
   5. 5ನೇ ದಿನ – ಗಾರ್ವೆಭಾವಿಪಾಳ್ಯ, ಲಕ್ಷ್ಮೀ ಬಡಾವಣೆ

   ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಶ್ರೀ ಡಾ॥ಯೋಗೇಶ್. ವೈದ್ಯರು ರವರು ಲಸಿಕೆ ಸ್ಟಾಕ್ ಅನುಗುಣವಾಗಿ ನೀಡುವುದಾಗಿ ವಾರ್ಡ್ ಸಭೆಗೆ ತಿಳಿಸಿದರು.
3. ದಿನಾಂಕ: 03.07.2021 ರಂದು ನಡೆದ ಸಭೆಯಲ್ಲಿ ಶ್ರೀ ಸೈಯದ್ ಸಲಾಂ ಮತ್ತು ಇತರರ ಸದಸ್ಯರು ರವರು ಪ್ರಸ್ತಾಪಿಸಿರುವಂತೆ ಕೋವಿಡ್-19 3ನೇ ಅಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವುದು, ಜಾಗೃತಿ ಅಭಿಯಾನ ಹಮ್ಮಿಕೊಳುವುದು, ಹೆಚ್ಚಾಗಿ ಆರೈಕೆ ಕೇಂದ್ರವನ್ನು ಸ್ಥಾಪಿಸುವುದು, ಹಾಗೂ ಪ್ರತ್ಯೇಕವಾಗಿ ಮಕ್ಕಳ ಅಸ್ಪತ್ರೆಯನ್ನು ಸ್ಥಾಪಿಸುವಂತೆ ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಶ್ರೀ ಡಾ॥ಯೋಗೇಶ್. ವೈದ್ಯರು ರವರು ವಾರ್ಡ್ ವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪಿಸಲು ಹೊಸಪಾಳ್ಯ ಗ್ರಾಮದ ಬಿಬಿಎಂಪಿ ನರ್ಸರಿ ಜಾಗದಲ್ಲಿ ಯೋಜಿಸಲಾಗುವುದಾಗಿರುತ್ತದೆ ಪ್ರಸ್ತಾವನೆಗೆ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರಿಗೆ ಶಿಫಾರಸ್ಸು ಸಲ್ಲಿಸಲಾಗುವುದೆಂದು ಸಭೆಗೆ ಹಾಜರಿದ್ದ ವೈದ್ಯರು ತಿಳಿಸಿದರು.
4. 3ನೇ ಅಲೆ ಹೆಚ್ಚಾಗಿರುವ ರಾಜ್ಯಗಳಾದ ಕೇರಳ ಮತ್ತು ಮಹಾರಾಷ್ಟ್ರಗಳಿಂದ ಬಂದಿರುವ ಜನರನ್ನು ಪತ್ತೆ ಮಾಡಿ ಕೋವಿಡ್-19 ಪರೀಕ್ಷೆಗೊಳಪಡಿಸಿ ಗೃಹ ಬಂದನಲ್ಲಿ ಇರುವಂತೆ ಸೂಚಿಸಲು ಬಿಬಿಎಂಪಿ ಅಧಿಕಾರಿಗಳಲ್ಲಿ ಶ್ರೀ ಚಂದ್ರರೆಡ್ಡಿ, ಶ್ರೀ ಶ್ರೀನಿವಾಸರೆಡ್ಡಿ, ಸುರೇಶ್‌ರೆಡ್ಡಿ ಮತ್ತು ರಾಘವೇಂದ್ರ ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಡಾ॥ ಯೋಗೇಶ್ ರವರು ತಿಳಿಸಿದ್ದರು.
5. ಶ್ರೀ ಚಂದ್ರಾರೆಡ್ಡಿ, ಶ್ರೀ ಶ್ರೀನಿವಾಸರೆಡ್ಡಿ, ಸುರೇಶ್‌ರೆಡ್ಡಿ ಮತ್ತು ಇತರ ಸದಸ್ಯರುಗಳು ಹಾಗೂ ರಾಘವೇಂದ್ರ ಮಾತನಾಡಿ Covaxin & Covishield ಒಟ್ಟಾರೇ ಇಲ್ಲಿಯವರೆಗೂ ಎಷ್ಟು ಜನಕ್ಕೆ ಲಸಿಕೆಯು ನೀಡಲಾಗಿದೆ, ಎಷ್ಟು ಬಾಕಿ ಉಳಿದೆದಿವೆಂದು ವಾರ್ಡ್ ಸದ್ಯಸರುಗಳಿಗೆ, ಸ್ಥಳೀಯರಿಗೆ ಮತ್ತು ಸಾರ್ವಜನಿಕರಿಗೆ ಪ್ರಕಟವಾಗುವಂತೆ ಮಾಡಲು ಪ್ರಶ್ನಿಸಿದರು. ಈ ಬಗ್ಗೆ ದೈನಂದಿನ ಮಾಹಿತಿಯನ್ನು ವಾಟ್ಸ್ ಆಪ್ ಮೂಲಕ ಸಂದೇಶ ನೀಡಲಾಗುವುದೆಂದು ಡಾ॥ಯೋಗೇಶ್ ರವರು ತಿಳಿಸಿದ್ದರು.

**(ಪು.ತಿ.ನೋ)**

Scanned with

1 6. ವಾರ್ಡ್ ವ್ಯಾಪ್ತಿಯಲ್ಲಿ ಪಾಸಿಟಿವ್ ಬಂದಿರುವ ಸ್ಥಳಗಳಲ್ಲಿ ಸೀಲ್ ಡೌನ್ ಮಾಡುವಂತೆ ಹಾಗೂ ಸಾರ್ವಜನಿಕರಿಗೆ ಗಮನಕ್ಕಾಗಿ ಪ್ರಚಾರ ಮಾಡಲು ಶ್ರೀ ಗೋಪಿನಾಥ ರವರು ತಿಳಿಸಿರುತ್ತಾರೆ. ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಡಾ|| ಯೋಗೇಶ್ ರವರು ಒಂದು ಜಾಗದಲ್ಲಿ ಮೂರು ಪಾಟಿಸಿವ್ ಪ್ರಕರಣ ಕಂಡು ಬಂದಲ್ಲಿ ಸೀಲ್ ಡೌನ್ ಮಾಡಲಾಗುವುದೆಂದು ಸಭೆಯಲ್ಲಿ ತಿಳಿಸುತ್ತಾ ಹೆಚ್.ಎಸ್.ಆರ್ ಬಡಾವಣೆ ಮತ್ತು ಮಂಗಮ್ಮನಪಾಳ್ಯ ವ್ಯಾಪ್ತಿಯಲ್ಲಿ ಇದುವರೆಗೂ ಒಂದು ಕಂಟೈನ್ಮೆಂಟ್ ಜೋನ್‌ಯಾಗಿರುತ್ತದೆ ಎಂದು ಸಭೆಗೆ ತಿಳಿಸಿದ್ದರು.

- **ಕಂದಾಯ ಇಲಾಖೆ :**

1. ವಾರ್ಡ್ ವ್ಯಾಪ್ತಿಯಲ್ಲಿ ಬಡ ಕುಟುಂಬದ ಮಕ್ಕಳು ಮತ್ತು ವಿದ್ಯಾಭ್ಯಾಸದಿಂದ ವಂಚಿತರಾಗಿರುವ ಮಕ್ಕಳನ್ನು ಪತ್ತೆ ಹಚ್ಚಿ ವಿದ್ಯಾಭ್ಯಾಸ ನಡೆಸಲು ಆರ್ಥಿಕದಿಂದ ತೊಂದರೆ ಅನುಭಸುತ್ತಿರುವ ಮಕ್ಕಳ ಬಗ್ಗೆ ಸರ್ವೆ ಮಾಡಿ ಹಾಗೂ ಸರ್ಕಾರಿ/ಖಾಸಗಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಬಗ್ಗೆ ಮಾಹಿತಿಯನ್ನು ಪಡೆದು ವಿದ್ಯಾಭ್ಯಾಸ ಸೌಲಭ್ಯವನ್ನು ಒದಗಿಸಲು ಸೂಕ್ತ ಕ್ರಮ ವಹಿಸಬೇಕೆಂದು ವಾರ್ಡ್ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳು ಮತ್ತು ಸ್ವಯಂ ಸೇವಕರುಗಳು ಸಭೆಯ ಗಮನಕ್ಕೆ ತಂದಿರುತ್ತಾರೆ. ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ ಶ್ರೀಮತಿ ಲಕ್ಷ್ಮೀ ಬಿ ರವರು ಉಪ ಆಯುಕ್ತರು ಕಂದಾಯ ರವರಿಂದ Children Survey Team ರಚಿಸಿಸಲಾಗಿದ್ದು, ಈಗಾಗಲೇ ಸದರಿ ತಂಡದೊಂದಿಗೆ ಕಂದಾಯ ಪರಿವೀಕ್ಷಕರು, ಕಂದಾಯ ನೀರಕ್ಷಕರು ರವರು ಸರ್ವೆ ನಡೆಸಲಾಗುತ್ತಿದ್ದು, ವಾರ್ಡ್ ಸದಸ್ಯರು ಮತ್ತು ಸ್ವಯಂ ಸೇವಕರ ಸಹಕಾರ ನೀಡುವಂತೆ ಸಭೆಯಲ್ಲಿ ತಿಳಿಸಿದ್ದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ:**

1. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮಾನ್ಯಹೋಲ್‌ಗಳನ್ನು ಸರ್ವೆ ಮಾಡಿ ದುರಸ್ಥಿ ಪಡಿಸುವಂತೆ ಶ್ರೀ ಗೋಪಿನಾಥ, ಶ್ರೀ ಚಂದ್ರ ರೆಡ್ಡಿ ಮತ್ತು ಇತರರು ಸದಸ್ಯರು ಹಾಗೂ ಸ್ವಯಂ ಸೇವಕರು ರವರು ಸಭೆಯಲ್ಲಿ ತಿಳಿಸಿದ್ದರು. ವಾರ್ಡ್ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್. ರವರ ಪರವಾಗಿ ಹಾಜರಿದ್ದ, ಶ್ರೀ ನಟರಾಜ್ ಬಿ.ಸಿ ವಾಟರ್ ಇನ್ಸ್‌ಪೆಕ್ಟರ್ ರವರು ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು.
2. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಕೆರೆಗಳಿಗೆ ಒಳಚರಂಡಿ ನೀರನ್ನು ನೇರವಾಗಿ ಬಿಡುತ್ತಿದ್ದು, ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿರುತ್ತವೆ ಎಂದು ಶ್ರೀ ಗೋಪಿನಾಥ, ಶ್ರೀ ಚಂದ್ರ ರೆಡ್ಡಿ ಮತ್ತು ಇತರರು ಸದಸ್ಯರು ಹಾಗೂ ಸ್ವಯಂ ಸೇವಕರು ರವರು ಸಭೆಯಲ್ಲಿ ತಿಳಿಸಿದ್ದರು. ವಾರ್ಡ್ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್. ರವರ ಪರವಾಗಿ ಹಾಜರಿದ್ದ, ಶ್ರೀ ನಟರಾಜ್ ಬಿ.ಸಿ ವಾಟರ್ ಇನ್ಸ್‌ಪೆಕ್ಟರ್ ರವರು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು.

- **ತೋಟಗಾರಿಕೆ:**

1. ವಾರ್ಡ್ ವ್ಯಾಪ್ತಿಯಲ್ಲಿರುವ ಬರುವ ಐ.ಟಿ.ಐ ಬಡಾವಣೆಯ ಉದ್ಯಾನವನದ ಆವರಣದಲ್ಲಿ ಹುಲ್ಲು ಕತ್ತರಿಸುವಂತೆ ಶ್ರೀ ಗೋಪಿನಾಥ ಸದಸ್ಯರು ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಸಹಾಯಕ ಅಧೀಕ್ಷಕರು ತೋಟಗಾರಿಕೆ ರವರ ಪರವಾಗಿ ಸಭೆಯಲ್ಲಿ ಹಾಜರಿದ್ದ ಶ್ರೀ ನಾರಾಣಪ್ಪ ತೋಟಗಾರಿಕೆ ನಿರೀಕ್ಷಕರು ರವರು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದೆಂದು ಸಭೆಯಲ್ಲಿ ತಿಳಿಸಿದ್ದರು.

- **ಅರಣ್ಯ ಇಲಾಖೆ:**

2. ವಾರ್ಡ್ ವ್ಯಾಪ್ತಿಯಲ್ಲಿ ಎಲ್ಲಾ ಗಿಡಗಳಿಗೆ ಸುರಕ್ಷಿತಗಾಗಿ ಗ್ರಿಲ್‌ಗಳನ್ನು ಅವಳಡಿಸುವಂತೆ ಶ್ರೀ ಗೋಪಿನಾಥ ಶ್ರೀ ಗೋಪಿನಾಥ ಸದಸ್ಯರು ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಟೆಂಡರ್ ಕರೆಯಲಾಗಿದ್ದು, ಅನುಮೋದನೆಗೊಂಡು ಕಾರ್ಯದೇಶ ನೀಡಿದ್ದ ನಂತರ ಕ್ರಮ ವಹಿಸಲಾಗುವುದೆಂದು ತಿಳಿಸಿದ್ದರು.

**(ಮು.ಪು.ನೋ)**

Scanned with

- **<u>ಕಾಮಗಾರಿ ಇಲಾಖೆ</u>**

1. ವಾರ್ಡ್ ವ್ಯಾಪ್ತಿಯ ಗಾರ್ವೇಭಾವಿಪಾಳ್ಯ ಕೆರೆಯ ಪಕ್ಕದಲ್ಲಿ ಚರಂಡಿ ನಿರ್ಮಿಸಲಾಗಿದ್ದು, ಹೊಸದಾಗಿ ಡಾಂಬರೀಕರಣ ರಸ್ತೆ ಕಾಮಗಾರಿಯನ್ನು ಕೈಗೊಳ್ಳುವಂತೆ ಶ್ರೀ ಚಂದ್ರ ರೆಡ್ಡಿ ಸದಸ್ಯರು ಮತ್ತು ಸ್ವಯಂ ಸೇವಕಾರದ ಶ್ರೀ ರಾಘವೇಂದ್ರ ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಈ ಆರ್ಥಿಕ ವರ್ಷದಲ್ಲಿ ಅನುಮೋದನೆ ಪಡೆದು ಕಾಮಗಾರಿ ಕೈಗೊಳ್ಳಲಾಗುವುದೆಂದು ಸಹಾಯಕ ಅಭಿಯಂತರರು ರವರು ತಿಳಿಸಿದ್ದರು.
2. ಹೊಸಪಾಳ್ಯ ಗ್ರಾಮದಲ್ಲಿರುವ ವಿದ್ಯುತ್ ಚಿತಗಾರ ಸುತ್ತಮುತ್ತಲಿನಲ್ಲಿ ರಸ್ತೆಗಳಿಗೆ ಹೊಸದಾಗಿ ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳುವಂತೆ ಶ್ರೀ ಶ್ರೀ ಚಂದ್ರ ರೆಡ್ಡಿ ಸದಸ್ಯರು ಮತ್ತು ಸ್ವಯಂ ಸೇವಕಾರದ ಶ್ರೀ ರಾಘವೇಂದ್ರ ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಈ ಆರ್ಥಿಕ ವರ್ಷದಲ್ಲಿ ಅನುಮೋದನೆ ಪಡೆದು ಕಾಮಗಾರಿ ಕೈಗೊಳ್ಳಲಾಗುವುದೆಂದು ಸಹಾಯಕ ಅಭಿಯಂತರರು ರವರು ತಿಳಿಸಿದ್ದರು.
3. ವಾರ್ಡ್ ವ್ಯಾಪ್ತಿಯ ಲಕ್ಷ್ಮೀ ಬಡಾವಣೆಯ 1ನೇ ಅಡ್ಡ ರಸ್ತೆಯಿಂದ 11ನೇ ಅಡ್ಡ ರಸ್ತೆಯ ವರೆಗೆ ಒಳಚರಂಡಿ ಕಾಮಗಾರಿಯನ್ನು ಪೂರ್ಣಗೊಂಡಿದ್ದು, ಈ ರಸ್ತೆಗಳಿಗೆ ಸಿಮೆಂಟ್ ರಸ್ತೆ ಕಾಮಗಾರಿ ಕೈಗೊಳ್ಳಲು ಶ್ರೀ ಸುರೇಶ್ ರೆಡ್ಡಿ ಸದಸ್ಯರು ರವರು ಸಭೆಯಲ್ಲಿ ತಿಳಿಸಿದ್ದರು. ಈ ಬಗ್ಗೆ ಈ ಆರ್ಥಿಕ ವರ್ಷದಲ್ಲಿ ಅನುಮೋದನೆ ಪಡೆದು ಕಾಮಗಾರಿ ಕೈಗೊಳ್ಳಲಾಗುವುದೆಂದು ಸಹಾಯಕ ಅಭಿಯಂತರರು ರವರು ತಿಳಿಸಿದ್ದರು.
4. 2021-22ನೇ ಸಾಲಿನಲ್ಲಿ ಒಂಟಿ ಮನೆ ನಿರ್ಮಾಣ ಯೋಜನೆ ಅಡಿಯಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳ ಪಟ್ಟಿಯನ್ನು ಅನುಮೋದನೆಗಾಗಿ ಜಂಟಿ ಆಯುಕ್ತರು, ಬೊಮ್ಮನಹಳ್ಳಿ ರವರ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ (ವಾರ್ಡ್ ಸಭೆಯಲ್ಲಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿ ಲಗತ್ತಿಸಿದೆ)

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ, ವಾರ್ಡ್ ನಂ.190ರ
ಸಹಾಯಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಧ್ಯಕ್ಷರು/ನೋಡಲ್ ಅಧಿಕಾರಿ ವಾರ್ಡ್ ನಂ.190
ಮಂಗಮ್ಮನಪಾಳ್ಯ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಆಪ್ತ ಶಾಖೆಗೆ ಸಲ್ಲಿಸಿದೆ
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಆಪ್ತ ಶಾಖೆಗೆ ಸಲ್ಲಿಸಿದೆ
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಆಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6. ವಾರ್ಡ್ ಸಮಿತಿಯ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

Scanned with